ಕೃಷ್ಣ ಜಲ ವಿವಾದ ನ್ಯಾಯಾಧಿಕರಣ 11ರ ದಿನಾಂಕ: 29.11.2013 ರಂದು ನೀಡಿರುವ ಅಂತಿಮ ಆದೇಶದ ಕ್ಲಾಸ್-ಎಕ್ಸ್(2) (ಎ)ರಲ್ಲಿ ಸೂಚಿಸಿರುವಂತೆ ತುಂಗಭದ್ರಾ ಕೆ-8 ಉಪ ಕೊಳ್ಳದಲ್ಲಿ ಶೇ.65ರ ಅವಲಂಬಿತ ಜಲ ವರ್ಷದಲ್ಲಿ 356 ಟಿಎಂಸಿ ನೀರಿನ ಪ್ರಮಾಣಗಿಂತ ಹೆಚ್ಚಾಗಿ ನೀರನ್ನು ಉಪಯೋಗಿಸಿಕೊಳ್ಳಲು ತಡೆ ಹಿಡ್ಡಿರುತ್ತದೆ.

ಗೋದಾವರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ, ಆದೇಶ (1980)ರ ಕ್ಲಾಸ್-ವಿ (ಸಿ)ರಲ್ಲಿ ಅಳವಡಸಲಾದ ಭಾಗವಾಗಿರುವ ದಿನಾಂಕ: 04.08.1978ರ ಒಪ್ಪಂದದ ಕ್ಲಾಸ್-7 (ಎ)ರನ್ವಯ 80 ಟಿಎಂಸಿ ನೀರನ್ನು ನಾಗಾರ್ಜುನಸಾಗರ ಯೋಜನೆಯ ಪೋಲ್ಪಾಗದಲ್ಲಿನ ಯೋಜನೆಗಳಲ್ಲಿ ಉಪಯೋಗಿಸಬಹುದಾಗಿದೆ. ಆದುದರಿಂದ, ಸದರಿ 80 ಟಿಎಂಸಿ ನೀರಿನಲ್ಲಿ ಕರ್ನಾಟಕ ರಾಜ್ಯದ ಪಾಲು 23 ಟಿಎಂಸಿ ನೀರನ್ನು ನಾಗಾರ್ಜುನಸಾಗರ ಯೋಜನೆಯ ಪೋಲ್ಪಾಗದಲ್ಲಿರುವ ತುಂಗಭದ್ರಾ ಉಪ ಕಣಿವೆಯಲ್ಲಿ ಉಪಯೋಗಿಸಲು ಕರ್ನಾಟಕ ರಾಜ್ಯವು ಪೂರ್ಣ ಹಕ್ಕನ್ನು ಹೊಂದಿರುತ್ತದೆ.

ಈ) ಗೋದಾವರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಆದೇಶ (1980)ರ ಕ್ಲಾಸ್-ವಿ (ಸಿ)ರಲ್ಲಿ ಅಳವಡಿಸಲಾದ ಭಾಗವಾಗಿರುವ ದಿನಾಂಕ: 04.08.1978ರ ಒಪ್ಪಂದದಲ್ಲಿ ಗೋದಾವರಿ ನದಿಯಿಂದ ತಿರುವುಗೊಳಿಸುವುದನ್ನು ಹೊರತುಪಡಿಸಿ ಬೇರೆ ಯಾವುದೇ ನೀರನ್ನು ಕೃಷ್ಣಾ ಕೊಳ್ಳಕ್ಕೆ ತಿರುವುಗೊಳಿಸಿರುವುದಿಲ್ಲ.

ಏತ ನೀರಾವರಿ ಯೋಜನೆಗಳು

1049 (936); ಶ್ರೀ ಭೀಮಾನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಂದಿದುರ್ಗ ಮತ್ತು ಕೆಂಚೆಟ್ಟನಹಳ್ಳಿ ಗ್ರಾಮಗಳಿಗೆ 2ನೇ ಹಂತದ ಹೊಸ ಏತ ನೀರಾವರಿ ಯೋಜನೆ ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ನಂದಿದುರ್ಗ ಮತ್ತು ಕೆಂಚಟ್ಟನಹಳ್ಳಿ 2 ನೇ ಹಂತದ ಹೊಸ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ತುಂಗಭದ್ರಾ ಜಲಾಶಯದಿಂದ ನೀರನ್ನು ಒದಗಿಸುವುದು:

1050 (937); ಶ್ರೀ ಎಸ್. ಭೀಮಾನಾಯ್ಕ (ಹಗರಿಬೊಮ್ಮನಹಳ್ಳಿ)

ಅ) ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ಜಲಾಶಯಕ್ಕೆ ತುಂಗಭದ್ರಾ ಜಲಾಶಯದಿಂದ ನೀರನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ತುಂಗಭದ್ರಾ ಮಂಡಳಿಯು ಅನುಮೋದನೆ ನೀಡಿದೆಯೇ;

ಇ) ಹಾಗಿದ್ದಲ್ಲಿ, ಡೆಂಟಲ್ ಪ್ರಾಜೆಕ್ಟ್ ರೀಪೋರ್ಟ್‌ನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತ ಮಂಡಳಿಯಿಂದ ಅನುಮೋದನೆ ಪಡೆದ ಪ್ರಸ್ತಾವನೆಯನ್ನು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈಗಾಗಲೇ ಸರ್ಕಾರ ಅನುಮೋದನೆ ನೀಡಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಎಂ. ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ಪರಿಶೀಲನೆಯಲ್ಲಿದೆ.